ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ವಿವಿಪ/ಅಸಾಮಾನ್ಯ/363/2022-23 ದಿನಾಂಕ:22.12.2022.

ಗೆ,
ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು-560001

ಮಾನ್ಯರೆ,

**ವಿಷಯ: ದಿನಾಂಕ: 16.12.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.**

****

ದಿನಾಂಕ: 16.12.2022 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು-560 001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2 ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ,
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬೆಂ.ನ.ವಿ/ವಿವಿಪ/ಅಸಾಮಾನ್ಯ/363/2022–23 ದಿನಾಂಕ: 22.12.2022.

ದಿನಾಂಕ 16.12.2022 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ | ಸಭಾಧ್ಯಕ್ಷರು |
| 2. | ಶ್ರೀ ರಮೇಶ್ ನಾರಾಯಣ್ ರಾವ್ | ಸದಸ್ಯರು |
| 3. | ಡಾ. ಪ್ರೇಮ | ಸದಸ್ಯರು |
| 4. | ಶ್ರೀ ಪಂಕಜ್ ಚೌಧರಿ | ಸದಸ್ಯರು |
| 5. | ಶ್ರೀಮತಿ ಸುಮಯಾ ಫಾತಿಮಾ | ಸದಸ್ಯರು |
| 6. | ಡಾ. ಎಲಿಝಾಬತ್ ಜಾಸ್ಮಿನ್ | ಸದಸ್ಯರು |
| 7. | ಪ್ರೊ. ಡಿ. ಆರ್ ಸುಧಾ | ಸದಸ್ಯರು |
| 8. | ಡಾ. ಮಹೇಶ್ ಕುಮಾರ್ ಕೆ. ಆರ್ | ಸದಸ್ಯರು |
| 9. | ಶ್ರೀ. ಸಿ. ಎಂ. ನವೀನ್ ಕುಮಾರ್ | ಸದಸ್ಯರು |
| 10. | ಡಾ. ಸುಪ್ರೀತ್ ಕಿತ್ತನಕೆರೆ | ಸದಸ್ಯರು |
| 11. | ಡಾ. ಎಂ. ಪಾಂಡುರಂಗಪ್ಪ | ಸದಸ್ಯರು |
| 12. | ಡಾ. ಪಿ.ಆರ್. ಚೇತನ | ಸದಸ್ಯರು |
| 13. | ಡಾ. ಎಸ್ ಹರಿಪ್ರಸಾದ್ | ಸದಸ್ಯರು |
| 14. | ಡಾ. ಕೆ ಶಿವಶಂಕರ | ಸದಸ್ಯರು |
| 15. | ಡಾ. ವಿ.ಆರ್ ದೇವರಾಜ್ | ಸದಸ್ಯರು |
| 16. | ಡಾ. ಎಂ. ಮುನಿರಾಜು | ಸದಸ್ಯರು |
| 17. | ಶ್ರೀ. ಎಸ್ ಚನ್ನಕೇಶವ | ಸದಸ್ಯರು |
| 18. | ಶ್ರೀ ಯೋಗೇಶ್ ಎಸ್. ರಾವ್ | ಸದಸ್ಯರು |
| 19. | ಶ್ರೀ ಆತ್ಮ ಹಿರೇಮಠ | ಸದಸ್ಯರು |
| 20. | ಡಾ. ವಿ.ಲೋಕೇಶ್<br>ಕುಲಸಚಿವರು ಮೌಲ್ಯಮಾಪನ | ಸದಸ್ಯರು |
| 21. | ಶ್ರೀ ರಘು ಜಿ. ಪಿ<br>ವಿತ್ತಾಧಿಕಾರಿಗಳು | ಸದಸ್ಯರು |
| 22. | ಶ್ರೀ. ಸಿ. ಎನ್ ಶ್ರೀಧರ್<br>ಕುಲಸಚಿವರು | ಸದಸ್ಯ<br>ಕಾರ್ಯದರ್ಶಿಗಳು |

ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರನ್ನು ಸ್ವಾಗತಿಸಿ ಕೋರಂ ಅಭಾವವಿರುವಿದನ್ನು ಸಭಾಧ್ಯಕ್ಷರ ಗಮನಕ್ಕೆ ತಂದರು. ಕುಲಪತಿಗಳು ಎಲ್ಲ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿ ಕೋರಂ ಅಭಾವದಿಂದಾಗಿ ಸಭೆಯನ್ನು 10 ನಿಮಿಷಗಳ ಅವಧಿಗೆ ಮುಂದೂಡುವುದಾಗಿ ತಿಳಿಸಿದರು.

ಹತ್ತು ನಿಮಿಷಗಳ ನಂತರ ಸಭೆಯನ್ನು ಪುನಃ ಪ್ರಾರಂಭಿಸಲಾಯಿತು. ಕುಲಸಚಿವರು ಎಲ್ಲ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಉದ್ದೇಶಿಸಿ ಪ್ರಾಸ್ತಾವಿಕವಾಗಿ ಮಾತನಾಡಲು ಸಭಾಧ್ಯಕ್ಷರಾದ ಕುಲಪತಿಗಳಿಗೆ ವಿನಂತಿಸಿದರು.

ಎಲ್ಲ ಸದಸ್ಯರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ವಿದ್ಯಾವಿಷಯಕ ಪರಿಷತ್ತಿಗೆ ಹೊಸದಾಗಿ ನಾಮನಿರ್ದೇಶನ ಹೊಂದಿದ ಕೆಳಕಂಡ ಸದಸ್ಯರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

ಅ) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, ಅನುಚ್ಛೇದ 30(1)(iv) ಅಡಿಯಲ್ಲಿ ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರು, ಶಿವಾಜಿ ನಗರ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಶ್ರೀ ರಿಜ್ವಾನ್ ಅರ್ಷದ್, ಇವರನ್ನು ಶ್ರೀಮತಿ ಸೌಮ್ಯ ರೆಡ್ಡಿ, ಶಾಸಕರು, ಜಯನಗರ ವಿಧಾನಸಭಾ ಕ್ಷೇತ್ರ ಅವರ ಸ್ಥಾನದಲ್ಲಿ ವಿದ್ಯಾವಿಷಯಕ ಪರಿಷತ್ ಪ್ರಾಧಿಕಾರದ ಸದಸ್ಯರಾಗಿ ನಾಮನಿರ್ದೇಶನ ಮಾಡಿರುವುದನ್ನು ಸಭೆಗೆ ತಿಳಿಸಿ ಸ್ವಾಗತಕೋರಿ, ಶ್ರೀಮತಿ. ಸೌಮ್ಯ ರೆಡ್ಡಿ ಅವರು ಸದಸ್ಯರಾಗಿ ಸಲ್ಲಿಸಿದ ಸೇವೆ ಮತ್ತು ಸಹಕಾರಗಳನ್ನು ಸ್ಮರಿಸಿ ದಾಖಲಿಸಲಾಯಿತು.

ಆ) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, ಅನುಚ್ಛೇದ 30(1)(vi) ಅಡಿಯಲ್ಲಿ ವಿದ್ಯಾವಿಷಯಕ ಪರಿಷತ್ತಿಗೆ ಸದಸ್ಯರಾಗಿ ನಾಮನಿರ್ದೇಶನ ಹೊಂದಿದ ಕೆಳಕಂಡ ಎಂಟು ಜನ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರಿಗೆ ಹೃತ್ಪೂರ್ವಕ ಸ್ವಾಗತ ಕೋರಿದರು.

i. ಶ್ರೀ. ರಮೇಶ್ ನಾರಾಯಣ್ ರಾವ್, ಪ್ರಾಂಶುಪಾಲರು,
ಆಚಾರ್ಯ ಸ್ಕೂಲ್ ಆಫ್ ಡಿಸೈನ್,

ii. ಡಾ. ಪ್ರೇಮ, ಪ್ರಾಂಶುಪಾಲರು,
ಸೆಂಟ್ ಥೆರೇಸಾ ಮಹಿಳಾ ಪದವಿ ಕಾಲೇಜು,

iii. ಶ್ರೀ. ಪಂಕಜ್ ಚೌಧರಿ, ಪ್ರಾಂಶುಪಾಲರು,
ಬಿ.ಎಂ.ಎಸ್ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜ್

iv. ಶ್ರೀಮತಿ ಸುಮಯಾ ಫಾತಿಮಾ, ಪ್ರಾಂಶುಪಾಲರು,
ಬಿ.ಇ.ಟಿ ಸಾದತ್‌ಉನ್ನಿಸಾ ಪದವಿ ಕಾಲೇಜು

v. ಡಾ. ಎಂ.ಆರ್ ಲಕ್ಷ್ಮಿನಾರಾಯಣ್, ಪ್ರಾಂಶುಪಾಲರು,
ಬಿ.ಇ.ಎಸ್ ಶಿಕ್ಷಣ ಕಾಲೇಜು

vi. ಡಾ. ಎಲಿಝಾಬತ್ ಜಾಸ್ಮಿನ್, ಪ್ರಾಂಶುಪಾಲರು,
ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಸೈಕಾಲಾಜಿಕಲ್ ರಿಸರ್ಚ್

vii. ಪ್ರೊ. ಡಿ. ಆರ್ ಸುಧಾ, ಪ್ರಾಂಶುಪಾಲರು,
ವಿಜಯ ಕಾಲೇಜು

viii. ಡಾ. ಮಹೇಶ್ ಕುಮಾರ್ ಕೆ.ಆರ್, ಪ್ರಾಂಶುಪಾಲರು,
ಕಮ್ಯೂನಿಟಿ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್

ಇ) ಕೆಳಗೆ ನಮೂದಿಸಿದ ಎಂಟು ಪ್ರಾಂಶುಪಾಲರ ವಿದ್ಯಾವಿಷಯಕ ಪರಿಷತ್ತಿನ ಸದಸ್ಯತ್ವದ ಅವಧಿ ದಿನಾಂಕ 29.10.2022 ರಂದು ಮುಕ್ತಾಯವಾಗಿದ್ದು, ಅವರು ನೀಡಿದ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಸಲ್ಲಿಸಲಾಯಿತು.

i. ಶ್ರೀ ಚಿಕ್ಕಮುನಿಯಪ್ಪ ಎಂ
ii. ಡಾ. ಶಿಂಟಿ ಆಂಟನಿ
iii. ಶ್ರೀ ಕೆ. ಶಿವಣ್ಣ
iv. ಡಾ. ಗರುನಾಥ್ ರಾವ್ ವೈದ್ಯ
v. ಡಾ. ಅನೇಸಿಯಾ
vi. ಪ್ರೊ. ಕೆ. ಎಂ. ಮಹೇಶ್
vii. ಶ್ರೀ ಸತೀಶ್ ಎಂ
viii. ಡಾ. ಮೊಹಮ್ಮದ್ ಸುಹೇಲ್ ಇಕ್ಬಾಲ್

ಈ) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, ಅನುಚ್ಛೇದ 30(1)(viii) ರಡಿಯಲ್ಲಿ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿದ್ದ, ಡಾ. ವಿ. ಗಾಯತ್ರಿ ಯವರು ದಿನಾಂಕ 30.11.2022 ರಂದು ವಿಶ್ವವಿದ್ಯಾನಿಲಯದ ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ. ಅವರು ಸಲ್ಲಿಸಿದ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು, ಅವರ ಸ್ಥಾನದಲ್ಲಿ ನಾಮನಿರ್ದೇಶಿತರಾದ ಡಾ. ಪಿ.ಆರ್ ಚೇತನಾ ಅವರನ್ನು ಸಭೆಗೆ ಸ್ವಾಗತಿಸಲಾಯಿತು.

******

ನಂತರ ವಿಶ್ವವಿದ್ಯಾನಿಲಯದಲ್ಲಿ ಜರುಗಿದ ಪ್ರಮುಖ ಚಟುವಟಿಕೆಗಳ ಕುರಿತು ಸಂಕ್ಷಿಪ್ತ ವರದಿಯನ್ನು ಮಾನ್ಯ ಕುಲಪತಿಗಳು ಸಭೆಯಲ್ಲಿ ಮಂಡಿಸಿದರು.

**NEP 2020 ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೈಗೊಂಡ ಕ್ರಮಗಳು**

1. 07-11-2022 ರಂದು NEP-FDP ಯೋಜನೆಯಡಿಯಲ್ಲಿ ಪದವಿ ವಿದ್ಯಾರ್ಥಿಗಳಿಗೆ ಕಡ್ಡಾಯ ವಿಷಯವಾದ SEC- Financial Education and Investment Awareness ವಿಷಯ ಕುರಿತಂತೆ ಒಂದು ದಿವಸದ ಕಾರ್ಯಾಗಾರವನ್ನು, KSHEC, NSE Academy ಸಹಯೋಗದೊಂದಿಗೆ ನಡೆಸಲಾಯಿತು. ಸಂಯೋಜಿತ ಮಹಾವಿದ್ಯಾಲಯಗಳಿಂದ 200ಕ್ಕೂ ಹೆಚ್ಚು ಅಧ್ಯಾಪಕರು ಈ ಕಾರ್ಯಗಾರದಲ್ಲಿ ಭಾಗವಹಿಸಿದರು.

2. ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನದ ಹಿನ್ನೆಲೆಯಲ್ಲಿ, ಶಿಕ್ಷಕರಿಗಾಗಿ NEP–FDP (Faculty Development Programme) ಅಡಿಯಲ್ಲಿ ಶಿಬಿರಗಳನ್ನು ಆಯೋಜಿಸಿ ಹೊಸ ಶಿಕ್ಷಣ ನೀತಿಯ ವಿವಿಧ ಆಯಾಮಗಳಾದ ಕೌಶಲ್ಯವರ್ಧನೆ ಹಾಗೂ ಸಾಮರ್ಥ್ಯವೃದ್ಧಿ ಕುರಿತು ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಯಿತು.

3. ದಿನಾಂಕ 09–12–2022 ರಂದು ಸಂಯೋಜಿತ ಕಮ್ಯುನಿಟಿ ಕಾಲೇಜಿನಲ್ಲಿ 3ನೇ ಸೆಮಿಸ್ಟರ್, ಮ್ಯಾನೇಜ್‌ಮೆಂಟ್ ವಿಷಯದ ಪ್ರಾಜಕ್ಟ್ ಒರಿಯಂಟೇಶನ್ ಕುರಿತು NEP–FDP (Faculty Development Programme) ಕೌಶಲ್ಯ ಅಭಿವೃದ್ಧಿ ಶಿಬಿರವನ್ನು ಜರುಗಿಸಲಾಯಿತು. ಸಂಯೋಜಿತ ಮಹಾವಿದ್ಯಾಲಯಗಳ ಶಿಕ್ಷಕರು ಇದರಲ್ಲಿ ಪಾಲ್ಗೊಂಡಿದ್ದರು.

4. ದಿನಾಂಕ 13.12.2022 ರಂದು ವಿಶ್ವವಿದ್ಯಾನಿಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ, ಉನ್ನತ ಶಿಕ್ಷಣ ಪರಿಷತ್, ನ್ಯಾಸ್‌ಕಾಮ್ ಮತ್ತು ಮೈಕ್ರೋಸಾಫ್ಟ್ ಸಂಸ್ಥೆಗಳ ಸಹಯೋಗದೊಂದಿಗೆ, 3 ಮತ್ತು 4ನೇ ಸೆಮಿಸ್ಟರ್‌ಗಳಿಗೆ ನಿಗದಿಪಡಿಸಲಾದ ಆರ್ಟಿಫಿಶಿಯಲ್ ಇಂಟಲಿಜನ್ಸ್ ವಿಷಯ ಕುರಿತು ಒಂದು ದಿವಸದ NEP–FDP (Faculty Development Programme) ಕಾರ್ಯಾಗಾರವನ್ನು ಜರುಗಿಸಲಾಯಿತು. ಸಂಯೋಜಿತ ಕಾಲೇಜುಗಳ ಶಿಕ್ಷಕರು ಇದರ ಉಪಯೋಗವನ್ನು ಪಡೆದರು.

5. ದಿನಾಂಕ 25.11.2022 ರಿಂದ 29.11.2022 ವರೆಗೆ Magic Bus India Ltd., ಎಂಬ NGO ಸಂಸ್ಥೆಯ ಸಹಯೋಗದೊಂದಿಗೆ, ಕೆನರಾಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗದಲ್ಲಿ ಐದು ದಿವಸಗಳ Placement Training ಆಯೋಜಿಸಲಾಗಿತ್ತು. ಈ Campus Recruitment ನಲ್ಲಿ ಐದು ಕಂಪನಿಗಳು ಪಾಲ್ಗೊಂಡು 60 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿರುತ್ತವೆ.

6. ಮಲ್ಲೇಶ್ವರಂನಲ್ಲಿ ಪ್ರಾರಂಭಿಸಲಾದ NEP-2020 ಆಧಾರಿತ ಮೊದಲ ಬಹುಶಿಸ್ತೀಯ ಮಹಿಳಾ ಘಟಕ ಮಹಾವಿದ್ಯಾಲಯಕ್ಕೆ ಒಂದು ವರ್ಷ ಪೂರ್ಣಗೊಂಡಿರುವ ಸಂದರ್ಭದಲ್ಲಿ, ಪ್ರಥಮ ಸಂಸ್ಥಾಪನ ದಿವಸ ಹಾಗೂ ರಾಜ್ಯೋತ್ಸವ ದಿನಾಚರಣೆಯನ್ನು ದಿನಾಂಕ 28–11–2022 ರಂದು, ಮಹಾವಿದ್ಯಾಲಯದ ಆವರಣದಲ್ಲಿ ಜರುಗಿಸಲಾಯಿತು. ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಡಾ: ಸಿ. ಎನ್. ಅಶ್ವಥ್ ನಾರಾಯಣ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ನಿವೃತ್ತ IAS ಅಧಿಕಾರಿ ಶ್ರೀ ಅನಿಲ ವಿನಾಯಕ ಗೋಕಾಕ್ ರವರು ಅತಿಥಿಯಾಗಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಕುಲಪತಿಗಳು ರಾಷ್ಟ್ರೀಯ ಶಿಕ್ಷಣ ನೀತಿಯ ವಿವಿಧ ಆಯಾಮಗಳನ್ನು ಮತ್ತು ಆಶಯಗಳನ್ನು ವಿವರಿಸಿದರು.

7. ದಿನಾಂಕ 07.12.2022 ರಂದು ಅಮೇರಿಕಾ ದೇಶದ ಸಾರ್ವಜನಿಕ ಕ್ಷೇತ್ರದ ಅಲಮೋ ಕಾಲೇಜುಗಳ ಸಮುದಾಯ (ಕ್ಲಸ್ಟರ್ ಮಾದರಿಯ ವಿಶ್ವವಿದ್ಯಾಲಯ) ಇದರ ಕುಲಾಧಿಪತಿಗಳಾದ ಡಾ: ಮೈಕ್ ಫ್ಲೋರ್ಸ್, ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಅಲೆಜಂಡ್ರ ಬ್ಯೂನೋ ಹಾಗೂ ನಿರ್ದೇಶಕಿ ಡಾ: ಉಷಾ ವೆಂಕಟ್ ರವರು ನಮ್ಮ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಪಠ್ಯಕ್ರಮ, ಸಂಶೋಧನೆ, Mobility Placement ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದೊಂದಿಗೆ ಪಾಲ್ಗೊಳ್ಳುವಿಕೆ ಕುರಿತು ಕುಲಪತಿಗಳು, ಅಧಿಕಾರಿಗಳು ಮತ್ತು ಪ್ರಾಧ್ಯಾಪಕರೊಂದಿಗೆ ಚರ್ಚಿಸಿದರು.

8. ಉತ್ತಮ ಆಡಳಿತ ಕುರಿತಂತೆ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ದಿನಾಂಕ 01-12-2022 ರಂದು ಹೊರಡಿಸಿರುವ ಆದೇಶ ಸಂ. ಇಡಿ/387/ಯುಆರ್‌ಸಿ/2022 ರಲ್ಲಿ ನೀಡಲಾದ ಮಾರ್ಗದರ್ಶನಗಳ ಪಾಲನೆ ಮಾಡಲಾಗುತ್ತಿದೆ. ಡಿಸೆಂಬರ್ ತಿಂಗಳನ್ನು ಸುಶಾಸನ ಮಾಸವನ್ನಾಗಿ ಆಚರಿಸಲಾಗುತ್ತಿದೆ. ಇದರ ಭಾಗವಾಗಿ **ಇಂದು ಜರುಗುತ್ತಿರುವ ಸಭೆಯ ಕಾರ್ಯಕಲಾಪಗಳನ್ನು ಯುಟ್ಯೂಬ್, ಫೇಸ್‌ಬುಕ್ ಟ್ವಿಟರ್ ಮತ್ತು ವೆಬ್‌ಪೇಜ್ ನಲ್ಲಿ ನೇರ ಪ್ರಸಾರ ಮಾಡಲಾಗುತ್ತಿದೆ.** ಸಭಾ ಕಾರ್ಯ ಕಲಾಪಗಳಿಗೆ ಸಂಬಂಧಿಸಿದ ಪರಿನಿಯಮದ ಪ್ರತಿ ಹಾಗೂ ಮಾನ್ಯ ಕುಲಾಧಿಪತಿಗಳ ಕಾರ್ಯಾಲಯ ಸಭೆ ಜರುಗಿಸುವಲ್ಲಿ ಕಡ್ಡಾಯವಾಗಿ ಪಾಲಿಸಬೇಕಾದ ನಿರ್ದೇಶನಗಳನ್ನು ಒಳಗೊಂಡ ದಿನಾಂಕ 27.10.20221 ರಂದು ಹೊರಡಿಸಿದ ಸುತ್ತೋಲೆಯನ್ನು ಈಗಾಗಲೇ ಎಲ್ಲಾ ಸದಸ್ಯರಿಗೆ ಒದಗಿಸಲಾಗಿದೆ. ದಯಮಾಡಿ ಸದಸ್ಯರು ಸಭಾ ಗೌರವ ಹಾಗೂ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಚರ್ಚೆಯಲ್ಲಿ ಭಾಗವಹಿಸಬೇಕೆಂದು ಕೋರಿದರು.

9. 2022-23ನೇ ಶೈಕ್ಷಣಿಕ ಸಾಲಿಗೆ ಅತಿಥಿ ಉಪನ್ಯಾಸಕರ ನೇಮಕಾತಿ ಸಮಿತಿಗಳು ಸಂದರ್ಶನ ಪ್ರಕ್ರಿಯೆ ಜರುಗಿಸಿ, ಆಯ್ಕೆ ಮಾಡಿದ ಅತಿಥಿ ಉಪನ್ಯಾಸಕರಿಗೆ ಆದೇಶಗಳನ್ನು ನೀಡಲಾಗಿದೆ.

10. ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಕಳೆದ ಎರಡು-ಮೂರು ವರ್ಷಗಳಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಅತ್ಯುತ್ತಮ ಪ್ರತಿಭೆಯನ್ನು ಪ್ರದರ್ಶನ ಮಾಡಿದ್ದು, ಇದನ್ನು ಗಮನಿಸಿದ ಅಖಿಲ ಭಾರತ ವಿಶ್ವವಿದ್ಯಾಲಯಗಳ ಸಂಘಟನೆ, (Association of Indian Universities-AIU) 2022-23ನೇ ಸಾಲಿನ **ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಪುರುಷರ ಕಬಡ್ಡಿ ಮತ್ತು ಹಾಕಿ ಪಂದ್ಯಾಟಗಳ** ಆಯೋಜನೆಯನ್ನು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿರುತ್ತಾರೆ. ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಪುರುಷರ ಕಬಡ್ಡಿ ಪಂದ್ಯಾಟಗಳನ್ನು ದಿನಾಂಕ 7-12-2022 ರಿಂದ 10.12.2022 ನಾಲ್ಕು ದಿವಸಗಳ ವರೆಗೆ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಕೋರಮಂಗಲದಲ್ಲಿರುವ ಸೇಂಟ್ ಫ್ರಾನ್ಸಿಸ್ ಸಂಯೋಜಿತ ಮಹಾವಿದ್ಯಾಲಯದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು. 112 ವಿಶ್ವವಿದ್ಯಾಲಯಗಳ ತಂಡಗಳ, 1,300 ಕ್ರೀಡಾ ಪಟುಗಳು ಮತ್ತು ಅಧಿಕಾರಿ ವರ್ಗ ಈ ಪಂದ್ಯಾಟದಲ್ಲಿ ಭಾಗವಹಿಸಿದರು.

    2019-20 ಮತ್ತು 2021-22 ಸಾಲಿನಲ್ಲಿ ಅಂತರ ವಿಶ್ವವಿದ್ಯಾಲಯಗಳ ಪುರುಷರ ಹಾಕಿ Championship ಮತ್ತು ರಾಷ್ಟ್ರೀಯ ವಿಶ್ವವಿದ್ಯಾಲಯ ಖೇಲೋ ಇಂಡಿಯಾ ಪಂದ್ಯಾಟಗಳಲ್ಲಿ ಸತತ ಎರಡು ಸಲ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ರಾಷ್ಟ್ರೀಯ Champion ಆಗಿರುವ ವಿಷಯವನ್ನು ತಿಳಿಸಿ, 2022-23ನೇ ಸಾಲಿನ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯಗಳ ಆರು ದಿವಸಗಳ ಪುರುಷರ ಹಾಕಿ ಪಂದ್ಯಾಟವನ್ನು ದಿನಾಂಕ 11-12-2022 ರಿಂದ 16-12-2022 ವರೆಗೆ ನಗರದ ಹಾಕಿ ಮೈದಾನದಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ ಆಯೋಜಿಸಲಾಯಿತು. 70 ವಿಶ್ವವಿದ್ಯಾನಿಲಯಗಳಿಂದ 1,200 ಕ್ರೀಡಾಪಟುಗಳು ಮತ್ತು ಅಧಿಕಾರಿಗಳು ಈ ಪಂದ್ಯಾಟದಲ್ಲಿ ಭಾಗವಹಿಸಿದ್ದಾರೆ. ನಮ್ಮ ವಿಶ್ವವಿದ್ಯಾನಿಲಯದ ಹಾಕಿ ತಂಡ ಪ್ರಥಮ ನಾಲ್ಕು ಸ್ಥಾನಗಳಲ್ಲಿ ಅರ್ಹತೆ ಪಡೆದು, ಒರಿಸ್ಸಾ ರಾಜ್ಯದ ಭುವನೇಶ್ವರದಲ್ಲಿ ಜರುಗಲಿರುವ ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಪುರುಷರ ಹಾಕಿ ಪಂದ್ಯಾವಳಿ ಹಾಗೂ ಖೇಲೋ ಇಂಡಿಯಾ ರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಅರ್ಹತೆ ಪಡೆದಿರುವುದನ್ನು ತಿಳಿಸಿದರು.

ಕುಲಪತಿಗಳ ಸಂಕ್ಷಿಪ್ತ ವರದಿಯ ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

**ವಿಷಯ ಸಂಖ್ಯೆ: 01**

ವಿಷಯ : ಕರ್ನಾಟಕ ಸರ್ಕಾರದ ನಿರ್ದೇಶನದ ಮೇರೆಗೆ, ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕರಣ 41 (2) ರ ಅಡಿಯಲ್ಲಿ ಸಿದ್ಧಪಡಿಸಿದ "The Statutes Relating to Appointment and Promotion of Teachers and Other Academic Stafff and Measures for the Maintenance of Standards In Higher Education in the Bengaluru City Univarsity, as per the UGC Regulations-2018" ಕರಡು ಪರಿನಿಯಮಗಳನ್ನು ಪರಿಶೀಲಿಸಿ ಅನುಮೋದಿಸುವ ಕುರಿತು.

ಉಲ್ಲೇಖ:
1. ಈ ಕಛೇರಿ ಪತ್ರ ಸಂಖ್ಯೆ: ಬೆಂನವಿ/ಕುಸಅ/99/2021-22 ದಿನಾಂಕ. 06.08.2021
2. ಸರ್ಕಾರದ ಪತ್ರ ಸಂಖ್ಯೆ:ಇಡಿ 327 ಯುಬಿವಿ 2021 ದಿನಾಂಕ. 28.01.2022
3. ಸರ್ಕಾರದ ಪತ್ರ ಸಂಖ್ಯೆ:ಇಡಿ 309 ಯುಎನ್ಇ 2021 ದಿನಾಂಕ. 26.07.2022
4. ಈ ಕಛೇರಿ ಪತ್ರ ಸಂಖ್ಯೆ; ಬೆಂನವಿ/ಕುಸಅ/99/2022-23/743 ದಿನಾಂಕ. 16.08.2022
5. ಸರ್ಕಾರದ ಪತ್ರ ಸಂಖ್ಯೆ:ಇಡಿ 489 ಯುಬಿವಿ 2022 ದಿನಾಂಕ. 08.12.2022

***ಪರಾಮರ್ಶಕ ಟಿಪ್ಪಣಿ:***

ವಿಶ್ವವಿದ್ಯಾನಿಲಯ ಸಿದ್ಧಪಡಿಸಿದ "Statutes Relating to Appointment and Promotion of Teachers and Other Academic Stafff and Measures for the Maintenanceof Standards in Higher Educaton in the Bengaluru City University as per the UGC Regulations -2018" ಕರಡು ಪರಿನಿಯಮಗಳನ್ನು ಪ್ರಥಮ ಹಂತದಲ್ಲಿ ದಿನಾಂಕ 19.08.2020 ರಂದು ಜರುಗಿದ ಹಣಕಾಸು ಸಮಿತಿ, ದಿನಾಂಕ 24.08.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್, ದಿನಾಂಕ 30.09.2020 ವಿಶೇಷ ಸಿಂಡಿಕೇಟ್ ಹಾಗೂ 30.11.2020 ರ ಸಿಂಡಿಕೇಟ್ ಸಭೆಗಳ ಅನುಮೋದನೆ ಪಡೆದು ಉಲ್ಲೇಖ (1) ರ ಈ ಕಛೇರಿ ಪತ್ರದಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಉಲ್ಲೇಖ (2) ರ ಸರ್ಕಾರದ ಪತ್ರದಲ್ಲಿ ಬೋಧಕ ಸಿಬ್ಬಂದಿಗಳ ನೇಮಕಾತಿ ಮತ್ತು ಸಂದರ್ಶನಕ್ಕಾಗಿ ಪ್ರತ್ಯೇಕ ಪರಿನಿಯಮಗಳನ್ನು ಒಂದೇ ಪರಿನಿಯಮಗಳಲ್ಲಿ ಅಳವಡಿಸಿಕೊಂಡು ಮರು ಪ್ರಸ್ತಾವನೆ ಸಲ್ಲಿಸಲು ಹಾಗೂ ಬೋಧಕ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಅರ್ಜಿಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ಸರ್ಕಾರದ ನಿರ್ದೇಶನದಂತೆ ಇತರ ಪ್ರಾಧಿಕರ ಅಥವಾ ಯಾವುದಾದರೂ ಒಂದು ವಿಶ್ವವಿದ್ಯಾನಿಲಯದ ಮೂಲಕ ಪರಿಶೋಧನೆ ನಡೆಸಿ, ನಿರ್ದಿಷ್ಟ ಸಂಖ್ಯೆಯ ಅರ್ಹ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಸಂದರ್ಶನದ ವೇಳೆ ಪಡೆಯುವ ಕುರಿತಂತೆ ಪರಿನಿಯಮಗಳಲ್ಲಿ ಅಳವಡಿಸಿಕೊಂಡು ಮರುಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿತ್ತು.

ಈ ಮಧ್ಯ, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾಲಯಗಳಲ್ಲಿನ ಬೋಧಕ ಸಿಬ್ಬಂದಿಗಳ ನೇಮಕಾತಿ, ಮುಂಬಡ್ತಿ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶೈಕ್ಷಣಿಕ ಗುಣಮಟ್ಟ ಕಾಪಾಡಿಕೊಳ್ಳುವ ಕುರಿತಂತೆ, ಮಾದರಿ ಪರಿನಿಮಾವಳಿಗಳನ್ನು ರಚಿಸಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ 309 ಯುಎನ್ಇ 2021, ದಿನಾಂಕ 17.11.2021 ರಲ್ಲಿ ಸಮಿತಿ ರಚಿಸಲಾಗಿದ್ದು, ಸದರಿ ಸಮಿತಿ ದಿನಾಂಕ 13.07.202022 ರಂದು ಸರ್ಕಾರಕ್ಕೆ ಸಲ್ಲಿಸಿದ ಕರಡು ಮಾದರಿ ಪರಿನಿಯಮಗಳನ್ನು ಉಲ್ಲೇಖ (3)ರ ಸರ್ಕಾರದ ಪತ್ರದಲ್ಲಿ ವಿಶ್ವವಿದ್ಯಾನಿಲಯಕ್ಕೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿರುತ್ತಾರೆ. ಉಲ್ಲೇಖ (3) ರ ಸರ್ಕಾರದ ಪತ್ರದ ಸೂಚನೆಯಂತೆ ಅಗತ್ಯ ಬದಲಾವಣೆಗಳನ್ನು ಮಾಡಿ ದಿನಾಂಕ 06.08.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಸಭೆಗಳ ಅನುಮೋದನೆ ಪಡೆದು ಉಲ್ಲೇಖ (4) ರ ವಿಶ್ವವಿದ್ಯಾನಿಲಯದ ಪತ್ರದೊಂದಿಗೆ ಮಾನ್ಯ ಕುಲಾಧಿಪತಿಗಳ ಅನುಮೋದನೆ ಕೋರಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಉಲ್ಲೇಖ (5) ರ ಸರ್ಕಾರದ ಪತ್ರದಲ್ಲಿ ವಿಶ್ವವಿದ್ಯಾನಿಲಯ ಸಲ್ಲಿಸಿರುವ ಪರಿನಿಯಮಗಳನ್ನು ನಿಯಮಾನುಸಾರ ಪರಿಶೀಲಿಸಲಾಗಿದೆ ಎಂದು ತಿಳಿಸಿ ಪರಿನಿಯಮಗಳ ಪ್ರತಿಯನ್ನು ಮರಳಿ ಕಳುಹಿಸಿ ಸದರಿ ಪರಿನಿಯಮಗಳನ್ನು ವಿಶ್ವವಿದ್ಯಾನಿಲಯದ ಶಾಸನಬದ್ಧ ಪ್ರಾಧಿಕಾರಗಳ ಅನುಮೋದನೆಯನ್ನು ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿರುತ್ತಾರೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ –2000 ಅನುಚ್ಛೇದ 41 (2) ಪ್ರಕಾರ ಸದರಿ ಪರಿನಿಯಮಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

ಕುಲಸಚಿವರು ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಿ ಕರಡು ಪರಿನಿಯಮಗಳನ್ನು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಲು ವಿದ್ಯಾವಿಷಯಕ ಸಭೆಯ ಅನುಮೋದನೆ ಕೋರಿದರು.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**"The Statutes Relating to Appointment and Promotion of Teachers and Other Academic Staff and Measures for the Maintenance of Standards In Higher Education in the Bengaluru City University, as per the UGC Regulations-2018" ಕರಡು ಪರಿನಿಯಮಗಳನ್ನು ಪರಿಶೀಲಿಸಿ ಸರ್ವಾನುಮತದ ಅನುಮೋದನೆ ನೀಡಿ ಇಂದು ಜರುಗಲಿರುವ ಸಿಂಡಿಕೇಟ್ ಸಭೆಯ ಅನುಮೋದನೆಗೆ ಶಿಫಾರಸ್ಸು ಮಾಡಲು ತೀರ್ಮಾನಿಸಲಾಯಿತು.**

ವಿಷಯ ಸಂಖ್ಯೆ: 2

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020–21 ನೇ ಸಾಲಿನ ವಾರ್ಷಿಕ ವರದಿಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗೆ ಮಂಡಿಸುವ ಕುರಿತು.

***ಪರಾಮರ್ಶಿಕ ಟಿಪ್ಪಣಿ***

ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳಿಂದ ಮತ್ತು ಸಂಯೋಜಿತ ಕಾಲೇಜುಗಳಿಂದ ಸ್ವೀಕರಿಸಲಾದ ಮಾಹಿತಿಯನ್ನು ನಿಗಧಿತ ನಮೂನೆಯಲ್ಲಿ ಕ್ರೋಢೀಕರಿಸಿ, ಸಿದ್ಧಪಡಿಸಿರುವ 2020–21ನೇ ಸಾಲಿನ ವಾರ್ಷಿಕ ವರದಿಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000 ಅನುಚ್ಛೇಧ 50(1) ರ ಪ್ರಕಾರ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿವರಣೆ:**

ಕುಲಪತಿಗಳು 2020–21ನೇ ಸಾಲಿನ ವಾರ್ಷಿಕ ವರದಿಯ ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಿದರು. ಮಾನ್ಯ ಕುಲಪತಿಗಳು ವಾರ್ಷಿಕ ವರದಿಯ ರೂಪುರೇಷೆಗಳನ್ನು ಸಭೆಗೆ ವಿವರಿಸಿದರು.

ಸದಸ್ಯರಾದ ಡಾ. ವಿ.ಆರ್ ದೇವರಾಜ್ ರವರು ಚರ್ಚೆಯಲ್ಲಿ ಪಾಲ್ಗೊಂಡು, ಮಹಾವಿದ್ಯಾಲಯಗಳಲ್ಲಿ ಅದರಲ್ಲೂ ಪ್ರಮುಖವಾಗಿ ಮಾನವಿಕ ವಿಜ್ಞಾನ – ಕೋರ್ಸುಗಳಲ್ಲಿ ವಿದ್ಯಾರ್ಥಿಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ

ಕಡಿಮೆಯಾಗಿರುವುದು ಕಳವಳಕಾರಿ ವಿಷಯವೆಂದು ತಿಳಿಸಿದರು. ಈ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅಗತ್ಯವಿದೆ ಎಂದು ತಿಳಿಸಿದರು. ಇದಲ್ಲದೆ ವರದಿಯಲ್ಲಿ ತಿಳಿಸಿದಂತೆ ರಸಾಯನಿಕ ವಸ್ತುಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವಲ್ಲಿ ಇನ್ನೂ ಹೆಚ್ಚಿನ ಕಾಳಜಿವಹಿಸಬೇಕೆಂದು ವಿಭಾಗದಲ್ಲಿರುವ ರಾಸಾಯನಿಕಗಳನ್ನು ವೈಜ್ಞಾನಿಕವಾಗಿ ವಿಲೇಮಾಡಲು ಕ್ರಮವಹಿಸಬೇಕೆಂದು ತಿಳಿಸಿದರು.

ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ವತಿಯಿಂದ ವಿದ್ಯಾರ್ಥಿವೇತನ ನೀಡುವ ಕುರಿತಂತೆ ಈ ಹಿಂದೆ ಪ್ರಸ್ತಾಪಿಸಲಾಗಿದ್ದು ಅದನ್ನು ಕಾರ್ಯರೂಪದಲ್ಲಿ ತಂದು ಪ್ರಯತ್ನಿಸಬೇಕೆಂದು ತಿಳಿಸಿ, 2020–21ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸಬಹುದೆಂದು ಅಭಿಪ್ರಾಯ ಪಟ್ಟರು.

ಸದಸ್ಯರಾದ ಶ್ರೀ ರಮೇಶ್ ನಾರಾಯಣ್ ರವರು ಚರ್ಚೆಯಲ್ಲಿ ಭಾಗವಹಿಸಿ ದೃಶ್ಯಕಲೆ, ವಿಭಾಗದಲ್ಲಿ ವಿನ್ಯಾಸ (Design) ಆಧಾರಿತ ಕೋರ್ಸುಗಳಿಗೆ ಹೆಚ್ಚಿನ ಬೇಡಿಕೆ ಇದೆ ಈ ಕೋರ್ಸುಗಳ ಪಠ್ಯಕ್ರಮದಲ್ಲಿ ಬದಲಾವಣೆ ಮಾಡಿರುವುದರಿಂದಾಗಿ ವರ್ಗಗಳಲ್ಲಿ ಕೇಳಿದ ಪಾಠವನ್ನು ವಿದ್ಯಾರ್ಥಿಗಳು ದೃಷ್ಯ ಹಾಗೂ ವಿನ್ಯಾಸ ರೂಪದಲ್ಲಿ ಪ್ರಾಯೋಗಿಕವಾಗಿ ರಚಿಸುವಲ್ಲಿ ತೊಡಗುತ್ತಾರೆ. ಇದರಿಂದಾಗಿ ಕಲಿಕೆ ಹಂತದಲ್ಲಿ ಪ್ರಾಯೋಗಿಕ ತರಬೇತಿ ಆಗುವುದರಿಂದ ತಮ್ಮ ವೃತ್ತಿಯನ್ನು ಬೇಗನೆ ಕಂಡುಕೊಳ್ಳುತ್ತಾರೆ. ಪಠ್ಯಕ್ರಮಗಳನ್ನು ಇಂದಿನ ಅಗತ್ಯಗಳಿಗೆ ಪೂರಕವಾಗಿ ಬದಲಾವಣೆಗೆ ಒಳಪಡಿಸಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿಗಾಗಿ ಡಿಜಿಟಲ್ ಜ್ಞಾನದ ಅಗತ್ಯವಿದೆ ಹಾಗೂ ಹೊಸ ಶಿಕ್ಷಣ ನೀತಿಯಲ್ಲಿ ಅಳವಡಿಸಿರುವ Skill Enhancement Course Ability Enhancement Course ಗಳು ಉತ್ತೇಜನಕಾರಿಯಾಗಿವೆ. ಅವುಗಳನ್ನು ಇನ್ನೂ ವೃತ್ತಿಪರಗೊಳಿಸಬೇಕೆಂದು ಹೇಳಿದರು.

ಡಾ. ಎಂ. ಮುನಿರಾಜು ರವರು ಆಯಾ ವರ್ಷದ ಸಂಯೋಜನೆ ಪ್ರಕ್ರಿಯೆ ಮುಗಿದ ತಕ್ಷಣ ನಮ್ಮಲ್ಲಿರುವ ಕೋರ್ಸುಗಳ ಕುರಿತು ಕಾರ್ಯಗಾರ ನಡೆಸಿ ಮಹಾವಿದ್ಯಾನಿಲಯಗಳಿಗೆ ಮಾಹಿತಿ ನೀಡಬೇಕೆಂದು ಸಲಹೆ ನೀಡಿದರು.

ಸದಸ್ಯರಾದ ಡಾ. ಮಹೇಶ್ ರವರು ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯಲ್ಲಿ ಇಳಿಮುಖವಾಗಿರುವುದು ಬಹುಶಃ, ಸ್ವಾಯತ್ತ ಕಾಲೇಜುಗಳು ಹಾಗೂ ಖಾಸಗಿ ವಿಶ್ವವಿದ್ಯಾಲಯಗಳು ನಮಗಿಂತ ಮೊದಲೇ ಪ್ರವೇಶ ಪ್ರಕ್ರಿಯೆಗಳನ್ನು ನಡೆಸಿರುವುದು ಒಂದು ಕಾರಣವಾಗಿದೆ ಎಂದು ತಿಳಿಸಿದರು. ಈ ವ್ಯತ್ಯಾಸವನ್ನು ನಿವಾರಿಸಿ ವಿದ್ಯಾರ್ಥಿಗಳ ಪ್ರವೇಶ ಬೇಗನೆ ಮಾಡಿದಲ್ಲಿ, ಪರಿಸ್ಥಿತಿ ಸುಧಾರಿಸುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಸದಸ್ಯರಾದ ಡಾ. ಸುಪ್ರೀತ್ ಕಿತ್ತನಕೆರೆರವರು ಮಾತನಾಡಿ, ಸ್ವಾಯತ್ತ ಕಾಲೇಜು ಹಾಗೂ ಖಾಸಗಿ ವಿಶ್ವವಿದ್ಯಾಲಯಗಳು ಮೊದಲೇ ಪ್ರವೇಶ ನೀಡುವುದರಿಂದ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಗುಣಮಟ್ಟದಲ್ಲಿ ಸಹ ವ್ಯತ್ಯಾಸವಾಗುತ್ತದೆ. ಶೈಕ್ಷಣಿಕ ರಂಗದಲ್ಲಿ ಗುಣಮಟ್ಟದ ಸುಧಾರಣೆ ತರುವಲ್ಲಿ ಮಂಚೂಣಿಯಲ್ಲಿರುವ ನಮ್ಮ ವಿಶ್ವವಿದ್ಯಾನಿಲಯ ಈ ವ್ಯತ್ಯಾಸವನ್ನು ಮುಂದಿನ ವರ್ಷದಲ್ಲಿ ಸರಿಪಡಿಸಬೇಕೆಂದು ತಿಳಿಸಿದರು.

ಕುಲಸಚಿವರು ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ ಕುರಿತಂತೆ ಮಾಹಿತಿ ನೀಡಿ, ಮಹಾವಿದ್ಯಾಲಯದ ಹಂತದಲ್ಲಿ ಅವರಿಗೆ ಕೋರ್ಸುವಾರು ಮಂಜೂರಾದ ಒಟ್ಟು ಪ್ರವೇಶ ಸಂಖ್ಯೆಯ ವಿದ್ಯಾರ್ಥಿಗಳ ಪ್ರವೇಶವಾಗದಿದ್ದರೂ ಪರೀಕ್ಷೆಗಳ ಫಲಿತಾಂಶದ ಆಧಾರದ ಮೇಲೆ ಪ್ರವೇಶಗಳನ್ನು ಪರಿಗಣಿಸಿದಲ್ಲಿ ಈ ವರ್ಷ ಕಳೆದ ವರ್ಷಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶವಾಗಿದೆ ಎಂದು ತಿಳಿಸಿದರು.

ಸದಸ್ಯರಾದ ಡಾ. ಸುಧಾ ರವರು ಸಹ ಕಲಾ ಮತ್ತು ವಿಜ್ಞಾನ ವ್ಯಾಸಂಗಗಳಲ್ಲಿ ಪ್ರವೇಶ ಕುರಿತು ಆತಂಕ ವ್ಯಕ್ತಪಡಿಸಿ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ನಾವು ಸ್ವಾಯತ್ತ ಮಹಾವಿದ್ಯಾಲಯ ಹಾಗೂ ಖಾಸಗಿ

ವಿಶ್ವವಿದ್ಯಾಲಯಗಳಿಗಿಂತ ಹಿಂದೆ ಇರುವುದು ಹಾಗೂ ಈ ಮೊದಲು ಮೂರು ಐಚ್ಚಿಕ ವಿಷಯಗಳನ್ನು ಅಧ್ಯಯನ ಮಾಡುವ ಪದ್ಧತಿಯಿಂದ ಎರಡು ವಿಷಯಗಳಿಗೆ ಬದಲಾವಣೆಯಾಗಿರುವುದು ಸ್ನಾತಕೋತ್ತರ ಪ್ರವೇಶ ಸಂಖ್ಯೆ ಇಳಿಮುಖಕ್ಕೆ ಒಂದು ಕಾರಣವಾಗಿರಬಹುದೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಸದಸ್ಯರ ಭಾವನೆಗಳಿಗೆ ಸ್ಪಂದಿಸುತ್ತಾ, ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಲ್ಲಿರುವ ನಿಕಾಯಗಳಲ್ಲಿ ಕೆಲವು ನಿಕಾಯಗಳ ಕೋರ್ಸುಗಳಿಗೆ ಮಾತ್ರ ಪ್ರವೇಶ ಸಂಖ್ಯೆಯಲ್ಲಿ ಇಳಿಮುಖವಾಗುತ್ತಿರುವುದು ಕಲಾ ಮತ್ತು ಮೂಲ ವಿಜ್ಞಾನ ಕೋರ್ಸುಗಳ ಪ್ರವೇಶ ಸಂಖ್ಯೆ ಆತಂಕಕಾರಿಯಾಗಿರುವುದು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಅನುಭವಕ್ಕೆ ಬಂದಿದೆ. ಈ ಕುರಿತು ಶೈಕ್ಷಣಿಕ ಸಮುದಾಯವಾಗಿ ನಾವೆಲ್ಲ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ಬಹುಶಃ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಇದಕ್ಕೆ ತಕ್ಕಮಟ್ಟದ ಪರಿಹಾರ ಕಂಡು ಬರುತ್ತಿದೆ. ಬಹುಶಿಸ್ತೀಯ ಕಲಿಕೆ, ಕೌಶಲ್ಯ ಅಭಿವೃದ್ಧಿ – AECC–SEC, Value Based Education ಇವೆಲ್ಲವುಗಳ ಪರಿಣಾಮವಾಗಿ ಮುಂದಿನ 3–4 ವರ್ಷಗಳಲ್ಲಿ ಪರಿಸ್ಥಿತಿ ಸುಧಾರಿಸುವ ಆಶಾದಾಯಕ ಭರವಸೆ ಇದೆ ಎಂದು ಹೇಳಿದರು.

ಸರ್ಕಾರದ ನಿರ್ದೇಶನದ ಪ್ರಕಾರ ಶೈಕ್ಷಣಿಕ ವೇಳಾಪಟ್ಟಿ ರಚಿಸಬೇಕಾಗುತ್ತದೆ. ಇದಲ್ಲದೆ UUCMS ಅಳವಡಿಕೆ ಸಹ ಪ್ರಾರಂಭಿಕ ಹಂತದಲ್ಲಿ ಗೋಚರಿಸಿದ ಕೆಲವು ಸಮಸ್ಯೆಗಳನ್ನು ಇಂದು ಸಾವಾಲಾಗಿ ಸ್ವೀಕರಿಸಿ ಸಾಕಷ್ಟು ಸುಧಾರಣೆ ಕಂಡುಕೊಳ್ಳಲಾಗಿದೆ. ಇದು ಒಂದು ನಿರಂತರ ಪ್ರಕ್ರಿಯೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಪ್ರಕಾರ ಪಠ್ಯಕ್ರಮ ರಚನೆ ಬಹಳ ಪ್ರಮುಖವಾದ ಅಂಶವಾಗಿದೆ. ವೃತ್ತಿಪರ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು, ಅವರ ಅಗತ್ಯಕ್ಕೆ ತಕ್ಕಂತೆ, ವಿದ್ಯಾರ್ಥಿಗಳಲ್ಲಿ ಕೌಶಲ್ಯ ವೃದ್ಧಿಯಾಗುವಂತಹ ವ್ಯಾಸಂಗ ಪದ್ಧತಿ ಅಳವಡಿಕೆ ಇವೆಲ್ಲವುಗಳು ಮುಂಬರುವ ದಿನಗಳಲ್ಲಿ ಬದಲಾವಣೆಗೆ ದಾರಿ ಹಾಗೂ ಪರಿಹಾರ ಕಂಡುಕೊಳ್ಳುವ ಮಾರ್ಗ ಎಂದು ತಿಳಿಸಿದರು.

ಸದಸ್ಯರು ಭಾವನೆ ಅನಿಸಿಕೆ ಹಾಗೂ ಆತಂಕಗಳು ಸ್ವಾಭಾವಿಕವಾಗಿದ್ದು ಅವು ವಿಶ್ವವಿದ್ಯಾಲಯದ ಆತಂಕಗಳು ಆಗಿವೆ. ಅವುಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ತಿಳಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನದಿಂದಾಗಿ ಪ್ರಸ್ತುತ ಒಪ್ಪಿಕೊಂಡಿರುವ ಎರಡು ಪ್ರಮುಖ ವಿಷಯಗಳ ಮಾದರಿ ಮುಂದುವರಿಯಲಿದೆ ಎಂದು ತಿಳಿಸಿದರು. ಬರುವ ವರ್ಷದಲ್ಲಿ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಸುಧಾರಣೆಗಳಿಗೆ ಪ್ರಯತ್ನಿಸುವುದಾಗಿ ತಿಳಿಸಿದರು. ಮಹಾವಿದ್ಯಾಲಯಗಳು ಸಹ ತಾವು ವಿದ್ಯಾರ್ಥಿಗಳಿಗೆ ಒದಗಿಸುವ ಕೋರ್ಸುಗಳು, ಪಠ್ಯಕ್ರಮ, ಕೌಶಲ್ಯ ಅಭಿವೃದ್ಧಿ ಇತ್ಯಾದಿ ವಿವರಗಳನ್ನು ಜಾಲತಾಣದಲ್ಲಿ ಪ್ರಕಟಿಸಬೇಕೆಂದು ಹೇಳಿದರು. ವಿದ್ಯಾರ್ಥಿಗಳ ಬಹುಶಿಸ್ತೀಯ ಕಲಿಕೆಗೆ ಮುಕ್ತ ಆಯ್ಕೆ (Open Elective) ವಿಷಯಗಳು ಸಹಾಯಕಾರಿ ಆಗಲಿವೆ ಎಂದು ತಿಳಿಸಿದರು. ವಿಶ್ವವಿದ್ಯಾನಿಲಯ ಸಹ ಮಹಾವಿದ್ಯಾಲಯಗಳೊಂದಿಗೆ ಜೊತೆಗೂಡಿ ಸವಾಲುಗಳನ್ನು ಎದುರಿಸಲು ಕ್ರಮವಹಿಸುತ್ತದೆ ನಾವಿಬ್ಬರು ಜೊತೆಗೂಡಿ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಪ್ರಯತ್ನಿಸೋಣ ಎಂದು ತಿಳಿಸಿದರು.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**2020-21ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ವಿದ್ಯಾವಿಷಯಕದ ಪರಿಷತ್ ಸಭೆ ಪರಿಗಣಿಸಿ ಸಿಂಡಿಕೇಟ್ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲು ಸರ್ವಾನುಮತದಿಂದ ಅನುಮೋದನೆ ನೀಡಲು ತೀರ್ಮಾನಿಸಿತು.**

ವಿಷಯ ಸಂಖ್ಯೆ: 3

Sub: Consideration of the recommendation of the BoS in Commerce - PG.

Ref: Proceedings of the BoS in Commerce PG held on 28.11.2022

***REFERENCE NOTE*:**

The Chairperson of the Board of Studies in Commerce PG –Dr. M. Muniraju has submitted the proceedings of the BoS of Commerce P.G. held on 28.11.2022.

The BoS has made recommendation regarding

1. Modifications in the structure of conduction examination for the paper titled "Financial Modeling for Business" for M.Com & M.Com (F&A)
2. Framing of Syllabus for newly introduced courses – M.Com (Business Analytics) & M.Com (Financial Markets)
3. Approval of Ph.D Guide ship for faculties working Research Centers of BCU
4. Other related discussion.

The Proceedings of the BoS is placed before the Academic Council for consideration and approval.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ಸದಸ್ಯರು ಪಠ್ಯಕ್ರಮ ಕುರಿತಂತೆ ಕೇಳಿದ ವಿವರಗಳಿಗೆ ವಾಣಿಜ್ಯ ನಿಕಾಯದ ಡೀನರು ಹಾಗೂ ಅಧ್ಯಯನ ಮಂಡಳಿ ಅಧ್ಯಕ್ಷರಾದ ಡಾ. ಎಂ. ಮುನಿರಾಜು ರವರು ವಿವರಣೆ ನೀಡಿದರು ಪಠ್ಯಕ್ರಮದಲ್ಲಿ ಥಿಯರಿ ಹಾಗೂ ಪ್ರಾಯೋಗಿಕ ಅಂಶಗಳ ಒಳಗೊಂಡಿವೆ ಎಂದು ತಿಳಿಸಿದರು.**

**ವಾಣಿಜ್ಯ ಸ್ನಾತಕೋತ್ತರ ಅಧ್ಯಯನ ಮಂಡಳಿಯ ಶಿಫಾರಸ್ಸುಗಳನ್ನು ಪರಿಶೀಲಿಸಿ ಒಪ್ಪಿಗೆ ನೀಡಲು ತೀರ್ಮಾನಿಸಲಾಯಿತು.**

**ಸಾಮಾನ್ಯ ವಿಷಯಗಳು:**

1. ಸದಸ್ಯರಾದ ಶ್ರೀ. ಯೋಗೇಶ್ ರಾವ್ ರವರು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಹಾಯವಾಣಿ/ ದೂರವಾಣಿ ಸಂಖ್ಯೆಗೆ ಬರುವ ಕರೆಗಳನ್ನು ಸ್ವೀಕರಿಸುವ ವ್ಯವಸ್ಥೆಯಾಗಬೇಕೆಂದು ತಿಳಿಸಿದರು. ಈ ಕುರಿತು ಕ್ರಮವಹಿಸಲಾಗುವುದು ಎಂದು ಕುಲಸಚಿವರು ತಿಳಿಸಿದರು.

2. UUCMS ನಲ್ಲಿ ವಿದ್ಯಾರ್ಥಿಗಳು ಪ್ರಥಮ ಸಲ ಪಾವತಿಸುವ ಶುಲ್ಕದ ಮಾಹಿತಿ/ಧೃಢೀಕರಣ ಬಾರದಿರುವುದರಿಂದ ವಿದ್ಯಾರ್ಥಿಗಳ ಎರಡನೇ ಸಲ ಶುಲ್ಕ ಪಾವತಿಸುತ್ತಿದ್ದಾರೆ ಇಂತಹ ಹಣ ಬೇಗನೆ ಮರುಪಾವತಿ ಮಾಡಲು ಕ್ರಮವಹಿಸಬೇಕೆಂದು ಹೇಳಿದರು.

ಕೆಲವು ವಿದ್ಯಾರ್ಥಿಗಳಿಗೆ ಈ ಸಮಸ್ಯೆಯಾಗಿರುವುದು. ಗಮನಕ್ಕೆ ಬಂದಿದೆ ಅದನ್ನು ಸರಿಪಡಿಸಿ ಕ್ರಮವಹಿಸಲಾಗುವುದು ಎಂದು ಕುಲಸಚಿವರು ತಿಳಿಸಿದರು.

ಸದಸ್ಯರಾದ ಮಹೇಶ್ ರವರು ಮಾತನಾಡಿ

1. UUCMS ನಲ್ಲಿ ಸಹಾಯವಾಣಿ ಹಾಗೂ ತಾಂತ್ರಿಕ ಸಮಸ್ಯೆಗಳ ಕುರಿತು ತಿಳಿಸಿದರು.
2. MBA/MCA ವ್ಯಾಸಂಗಗಳ ಪ್ರವೇಶಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಆಗುತ್ತಿದ್ದು. ಕರ್ನಾಟಕ ಸರ್ಕಾರ ಉಳಿದ ಸ್ನಾತಕೋತ್ತರ ವ್ಯಾಸಂಗಗಳ ವೇಳಾಪಟ್ಟಿ ಹಾಗೂ ಈ ವಿಷಯಗಳ ವೇಳಾಪಟ್ಟಿಯಲ್ಲಿ ವ್ಯತ್ಯಾಸವಾಗುತ್ತದೆ ಎಂದು ತಿಳಿಸಿದರು ಹಾಗೂ ಕೆಲವು ಸುತ್ತೋಲೆಗಳು ಈ ವ್ಯಾಸಂಗಗಳಿಗೆ ಅನ್ವಯವಾಗುವುದಿಲ್ಲವೆಂದು ಹೇಳಿದರು.

MBA / MCA /M.Ed ಮಹಾವಿದ್ಯಾಲಯಗಳ ಪ್ರತ್ಯೇಕವಾದ ವೇಳಾಪಟ್ಟಿ ರಚಿಸಿ ಇವುಗಳಿಗೆ ಸಂಬಂಧಿಸಿದ ಮಾಹಿತಿ ನೀಡಲು ಕ್ರಮ ವಹಿಸಲಾಗುವುದು ಎಂದು ತಿಳಿಸಲಾಯಿತು.

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಗಳು |
| ಸದಸ್ಯಕಾರ್ಯದರ್ಶಿಗಳು | ಸಭಾಧ್ಯಕ್ಷರು |

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು